## ವಿವೇಕ್ ಟೂತ್‌ಪೇಸ್ಟ್

ಒಂದು ಟೂತ್‌ಪೇಸ್ಟ್ ಕಂಪನಿಯವರು ಎಷ್ಟು ಜನ ಯಾವ ಯಾವ ಕಂಪನಿಯ ಟೂತ್‌ಪೇಸ್ಟ್ ಬಳಸುತ್ತಾರೆ ಎನ್ನುವುದನ್ನು ತಿಳಿಯಲು ಸಮೀಕ್ಷೆ ನಡೆಸುತ್ತಿದ್ದರು. ಸಮೀಕ್ಷೆಯಲ್ಲಿ ಗುಂಡನನ್ನು ಕೇಳಿದರು, 'ನೀವು ಯಾವ ಟೂತ್‌ಪೇಸ್ಟ್ ಬಳಸ್ತೀರಾ?' ಎಂದು. ಅದಕ್ಕೆ ಗುಂಡ, 'ವಿವೇಕ್ ಟೂತ್‌ಪೇಸ್ಟ್' ಎಂದ. ಕಂಪನಿಯವರು ಎಷ್ಟು ತಲೆಕೆಡಿಸಿಕೊಂಡರೂ ವಿವೇಕ್ ಕಂಪನಿಯ ಬಗ್ಗೆ ತಿಳಿಯಲಿಲ್ಲ. ಗುಂಡನನ್ನು ಪಕ್ಕಕ್ಕೆ ಕರೆದು 'ಅದು ಯಾವ ಕಂಪನಿ ಸರ್?' ಎಂದು ಕೇಳಿದರು. 'ಅದು ಕಂಪನಿ ಅಲ್ಲ ಸರ್, ನನ್ನ ಗೆಳೆಯನ ಹೆಸರು. ನಾನು ಬಳಸೋದು ವಿವೇಕನ ಟೂತ್‌ಪೇಸ್ಟ್' ಎಂದ ಗುಂಡ!



**ಶಂಕರೇಗೌಡ ತುಂಬಕೆರೆ**



## ಪಕ್ಕದ ಮರದಲ್ಲಿ...

ಗುಂಡ ಮಾವಿನ ಮರ ಹತ್ತಿ ಹಣ್ಣು ಕೀಳುತ್ತಿದ್ದ. ಅಲ್ಲಿಗೆ ಬಂದ ತೋಟದ ಮಾಲೀಕ 'ಕದ್ದು ಹಣ್ಣು ಕೀಳುತ್ತೀಯಾ? ಇರು ನೀಗಲೇ ನಿಮ್ಮ ಮನೆಗೆ ಹೋಗಿ, ನಿಮ್ಮ ತಂದೆಗೆ ಹೇಳ್ತೀನಿ' ಎಂದ. ಆಗ ಗುಂಡ, 'ಅವ್ರು ಮನೇಲಿಲ್ಲ, ಇಲ್ಲೇ ಪಕ್ಕದ ಮರದ ಮೇಲೆ ಹಣ್ಣು ಕೀಳ್ತಾ ಇದ್ದಾರೆ' ಅಂದ.

**ಪಿ. ಜಯವಂತ ಪೈ**

ಚಿತ್ರಗಳು: ಗಣೇಶ ಆಚಾರ್ಯ